# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 865 |
| ವಿಧಾನ ಪರಿಷತ್ತು ಸದಸ್ಯರು | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 13.12.2023 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮಗಳ ಗ್ರಾಮ ಠಾಣಾ ಗಡಿಯ ವಿಸ್ತರಣೆ / ಪುನರ್ ನಿಗಧಿ ಮಾಡಿ ಮೂಲ ಸೌಕರ್ಯಗಳನ್ನು ಕಲ್ಪಿಸದಿರುವುದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಆ) | ಬಂದಿದ್ದಲ್ಲಿ, ಗ್ರಾಮಗಳ ಗ್ರಾಮಠಾಣಾ ಗಡಿಯ ವಿಸ್ತರಣೆ / ಪುನರ್ ನಿಗಧಿ ಹಾಗೂ ಮೂಲ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು) | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸುತ್ತೋಲೆ ಸಂಖ್ಯೆ: ಗ್ರಾಅಪಂ/341/ಗ್ರಾಪಂಅ/2016 (ಭಾಗ-3), ದಿನಾಂಕ: 28-10-2016 ರನ್ವಯ ಗ್ರಾಮಗಳ ಗ್ರಾಮಠಾಣಾ ಗಡಿಯನ್ನು ವಿಸ್ತರಣೆ / ಪುನರ್ ನಿಗಧಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ. |
| ಇ) | ರಾಜ್ಯದಲ್ಲಿರುವ ಗ್ರಾಮಗಳ ಒಟ್ಟು ಸಂಖ್ಯೆ ಎಷ್ಟು; ಈವರೆವಿಗೂ ಎಷ್ಟು ಗ್ರಾಮಗಳ ಗ್ರಾಮ ಠಾಣಾ ಗಡಿಯನ್ನು ಪುನರ್ ನಿಗಧಿ ಪಡಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಭೂದಾಖಲೆಗಳ ಪ್ರಕಾರ ರಾಜ್ಯದಲ್ಲಿ ಒಟ್ಟು 30,662 ಕಂದಾಯ ಗ್ರಾಮಗಳಿವೆ. ಈ ಪೈಕಿ ಗ್ರಾಮ ಠಾಣಾ ಗಡಿಯನ್ನು ಪುನರ್ ನಿಗಧಿ ಪಡಿಸಲಾಗಿರುವ ಮತ್ತು ಈ ಸಂಬಂಧ ಸರ್ವೆ ಕಾರ್ಯ ಪ್ರಗತಿಯಲ್ಲಿರುವ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಈ) | ಗ್ರಾಮಗಳ ಗ್ರಾಮ ಠಾಣಾ ಗಡಿಯನ್ನು ಪುನರ್ ನಿಗಧಿ ಪಡಿಸುವ ಸಂಬಂಧ ಗ್ರಾಮಗಳ ಸರ್ವೆ ಕಾರ್ಯ ನಡೆದಿದ್ದಲ್ಲಿ ಸರ್ವೆ ಕಾರ್ಯ ಪ್ರಗತಿಯಲ್ಲಿರುವ ಗ್ರಾಮಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | |
| ಉ) | ಗ್ರಾಮ ಠಾಣಾ ಗಡಿಯನ್ನು ಪುನರ್ ನಿಗಧಿಪಡಿಸಿ ಅಂತಿಮಗೊಳಿಸಲು ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಸಮಿತಿ ರಚಿಸಲಾಗಿದೆಯೇ; ಹಾಗಿದ್ದಲ್ಲಿ, ಸಮಿತಿಗಳ ಕಾರ್ಯ ಚಟುವಟಿಕೆಗಳ ಕುರಿತು ಸಂಪೂರ್ಣ ಮಾಹಿತಿ ನೀಡುವುದು; | ಪ್ರಸ್ತುತ ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಸಮಿತಿ ರಚಿಸಿರುವುದಿಲ್ಲ. |
| ಊ) | ಈಗಾಗಲೇ ಸರ್ವೆ ನಂಬರುಗಳನ್ನು ನೀಡಿ, ಅಳತೆಯಾಗಿ ನಿಗಧಿ ಪಡಿಸಲಾಗಿರುವಂತಹ ಪ್ರದೇಶವನ್ನು ಗ್ರಾಮ ಠಾಣಾ ಎಂದು ಘೋಷಿಸಲು ಅವಕಾಶ ಇದೆಯೇ? (ಆದೇಶ ಪ್ರತಿ ಮತ್ತು ಸಂಪೂರ್ಣ ಮಾಹಿತಿ ನೀಡುವುದು) | ಈಗಾಗಲೇ ಸರ್ವೆ ನಂಬರುಗಳನ್ನು ನೀಡಿರುವ ಪ್ರದೇಶವನ್ನು ಸರ್ಕಾರದ ಸುತ್ತೋಲೆ ನಂ.ಗ್ರಾಅಪಂ/341/ಗ್ರಾಪಂಅ/2016 (ಭಾಗ-3), ದಿನಾಂಕ: 28-10-2016 ರನ್ವಯ ಗ್ರಾಮಗಳ ಗ್ರಾಮ ಠಾಣಾ ಗಡಿಯನ್ನು ವಿಸ್ತರಿಸಲು ಅವಕಾಶವಿದ್ದು ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಕಂಇ 198 ಎಸ್ಎಸ್ಸಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| ಅನುಬಂಧ-1 | | | | |
|---|---|---|---|---|
| **ಗ್ರಾಮ ಠಾಣಾ ಗಡಿಯನ್ನು ಪುನರ್ ನಿಗಧಿಪಡಿಸಲಾಗಿರುವ ಮತ್ತು ಈ ಸಂಬಂಧ ಸರ್ವೆ ಕಾರ್ಯ ಪ್ರಗತಿಯಲ್ಲಿರುವ ಜಿಲ್ಲಾವಾರು ವಿವರ** | | | | |
| ಕ್ರ. | ಜಿಲ್ಲೆ | ಗ್ರಾಮ ಠಾಣಾ ವಿಸ್ತರಣೆಗೆ (ಪುನರ್ ನಿಗಧಿ) ಗುರ್ತಿಸಿರುವ ಒಟ್ಟು ಗ್ರಾಮಗಳ ಸಂಖ್ಯೆ | ಗ್ರಾಮ ಠಾಣಾ ವಿಸ್ತರಣೆ (ಪುನರ್ ನಿಗಧಿ) ಅಳತೆ ಪೂರ್ಣಗೊಂಡ ಗ್ರಾಮಗಳ ಸಂಖ್ಯೆ | ಗ್ರಾಮ ಠಾಣಾ ವಿಸ್ತರಣೆ (ಪುನರ್ ನಿಗಧಿ) ಅಳತೆ ಕಾರ್ಯ ಪ್ರಗತಿಯಲ್ಲಿರುವ ಗ್ರಾಮಗಳ ಸಂಖ್ಯೆ |
| 1 | ಚಿಕ್ಕಬಳ್ಳಾಪುರ | 86 | 86 | 0 |
| 2 | ಚಿತ್ರದುರ್ಗ | 0 | 0 | 0 |
| 3 | ತುಮಕೂರು | 0 | 0 | 0 |
| 4 | ದಾವಣಗೆರೆ | 0 | 0 | 0 |
| 5 | ಬೆಂಗಳೂರು ಗ್ರಾಮಾಂತರ | 0 | 0 | 0 |
| 6 | ಬೆಂಗಳೂರು ಜಿಲ್ಲೆ | 0 | 0 | 0 |
| 7 | ಶಿವಮೊಗ್ಗ | 0 | 0 | 0 |
| 8 | ಕೋಲಾರ | 0 | 0 | 0 |
| 9 | ರಾಮನಗರ | 0 | 0 | 0 |
| 10 | ಉಡುಪಿ | 0 | 0 | 0 |
| 11 | ಕೊಡಗು | 0 | 0 | 0 |
| 12 | ಚಿಕ್ಕಮಗಳೂರು | 0 | 0 | 0 |
| 13 | ಚಾಮರಾಜನಗರ | 0 | 0 | 0 |
| 14 | ದಕ್ಷಿಣ ಕನ್ನಡ | 0 | 0 | 0 |
| 15 | ಮಂಡ್ಯ | 0 | 0 | 0 |
| 16 | ಮೈಸೂರು | 0 | 0 | 0 |
| 17 | ಹಾಸನ | 0 | 0 | 0 |
| 18 | ಉತ್ತರಕನ್ನಡ | 16 | 11 | 5 |
| 19 | ಗದಗ | 0 | 0 | 0 |
| 20 | ಧಾರವಾಡ | 0 | 0 | 0 |
| 21 | ಬಿಜಾಪುರ | 0 | 0 | 0 |
| 22 | ಬೆಳಗಾವ | 0 | 0 | 0 |
| 23 | ಬಾಗಲಕೋಟೆ | 0 | 0 | 0 |
| 24 | ಹಾವೇರಿ | 0 | 0 | 0 |
| 25 | ಕೊಪ್ಪಳ | 0 | 0 | 0 |
| 26 | ಗುಲ್ಬರ್ಗ | 0 | 0 | 0 |
| 27 | ಬೀದರ್ | 0 | 0 | 0 |
| 28 | ಯಾದಗಿರ್ | 0 | 0 | 0 |
| 29 | ರಾಯಚೂರು | 0 | 0 | 0 |
| 30 | ವಿಜಯನಗರ | 0 | 0 | 0 |
| 31 | ಬಳ್ಳಾರಿ | 2 | 0 | 2 |
| | **ಒಟ್ಟು** | **104** | **97** | **7** |